ಅಪೀಲು ಪ್ರಾಧಿಕಾರವು ಆಗಸ್ಟ್ ತಿಂಗಳಿನಲ್ಲಿ ನಡೆಸಲಿರುವ ''ಹಿಯರಿಂಗ್''ನಲ್ಲಿ ಮಂಡಿಸಲು ಐ.ಡಿ.ಬಿ.ಐ.ಯನ್ನು ಸರ್ಕಾರ ಕೋರಿದೆ. ಸದರಿ ಮಿಲ್ಲನ್ನು ಪುನಃ ಪ್ರಾರಂಭಿಸಲು ಸರ್ಕಾರವು ಉತ್ಸಾಹ ತಾಳಿದೆ ಹಾಗೂ ಈ ಬಗ್ಗೆ ಬಿ.ಐ.ಎಫ್.ಆರ್.ನ ತೀರ್ಮಾನದ ಅನುಸಾರವಾಗಿ ಕ್ರಮ ತೆಗೆದು ಕೊಳ್ಳಲಾಗುವುದು.

ಕೈಮಗ್ಗ, ವಿದ್ಯುತ್ ಮಗ್ಗ ಮತ್ತು ಜವಳಿ ಕೈಗಾರಿಕೆಗಳಿಗಾಗಿ ಪ್ರತ್ಯೇಕ ನಿರ್ದೇಶನಾಲಯವನ್ನು ಸ್ಥಾಪಿಸುವ ಬಗ್ಗೆ

೧೪೬೪. ಶ್ರೀ ಸುಭಾಶ್ ಜೋಶಿ (ನಿಪ್ಪಾಣಿ).—ಮಾನ್ಯ ಉಪ ಸಚಿವೆ, ಸಣ್ಣ ಕೈಗಾರಿಕೆಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

(ಅ) ಸರ್ಕಾರದವರು ಕೈಮಗ್ಗ, ವಿದ್ಯುತ್ ಮಗ್ಗಗಳು ಹಾಗೂ ಜವಳಿಗಾಗಿ ಪ್ರತ್ಯೇಕ ನಿರ್ದೇಶನಾಲಯವನ್ನು ಹೊಂದಲು ಯೋಚಿಸಿದ್ದಾರೆಯೇ ?

(ಆ) ಹಾಗಾದರೆ, ಯಾವಾಗ ಬೇರೆಗೊಳಿಸಲಾಗುವುದು ?

(ಇ) ಸರ್ಕಾರದವರು ನಿರ್ದೇಶನಾಲಯಕ್ಕೆ ಪ್ರತ್ಯೇಕ ಮಂತ್ರಿಗಳನ್ನು ಹೊಂದಲು ಯೋಚಿಸಿದ್ದಾರೆಯೇ ?

ಶ್ರೀಮತಿ ಸುಮಾ ವಸಂತ (ಸಣ್ಣ ಕೈಗಾರಿಕೆಯ ಉಪ ಸಚಿವೆ).—

(ಅ) ಹೌದು.

(ಆ) ಈಗಾಗಲೇ ಸರ್ಕಾರದ ಆದೇಶವಾಗಿರುವುದು.

(ಇ) ಸದ್ಯಕ್ಕೆ ಈ ವಿಚಾರ ಇರುವುದಿಲ್ಲ.

ಬೆಂಗಳೂರು ನಗರದಲ್ಲಿರುವ ರಸ್ತೆ ಬದಿಯ ಪೆಟ್ಟಿಗೆ ಅಂಗಡಿಗಳ ಸಂಖ್ಯೆ ಬಗ್ಗೆ

೧೩೪೯. ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ).—ಮಾನ್ಯ ಕೈಗಾರಿಕೆ, ಇಂಧನ ಹಾಗೂ ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

(ಅ) ಲಿಡ್ಕರ್ ಮತಿಯಿಂದ ಬೆಂಗಳೂರು ನಗರಕ್ಕೆ ಇಲ್ಲಿಯವರೆವಿಗೂ ನೀಡಲಾಗಿರುವ ಬೀದಿ ಬದಿಯ ಪೆಟ್ಟಿಗೆ ಅಂಗಡಿಗಳ ಸಂಖ್ಯೆ ;

(ಆ) ಅವುಗಳ ಪೈಕಿ ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರಕ್ಕೆ ನೀಡಲಾಗಿರುವ ಬೀದಿ ಬದಿಯ ಪೆಟ್ಟಿಗೆ ಅಂಗಡಿಗಳ ಸಂಖ್ಯೆ ಎಷ್ಟು ;

(ಇ) ಲಿಡ್ಕರ್ ಮತಿಯಿಂದ ಬೆಂಗಳೂರು ನಗರಕ್ಕೆ ೧೯೯೯–೨೦೦೦ನೇ ಸಾಲಿನಲ್ಲಿ ನೀಡಲಾಗಿರುವ ಬೀದಿ ಬದಿಯ ಪೆಟ್ಟಿಗೆ ಅಂಗಡಿಗಳ ಸಂಖ್ಯೆ ಎಷ್ಟು :

(ಈ) ಅವುಗಳ ಪೈಕಿ ಚಿಕ್ಕಪೇಟೆ ವಿಧಾನ ಸಭಾ ಕ್ಷೇತ್ರಕ್ಕೆ ೧೯೯೯–೨೦೦೦ನೇ ಸಾಲಿನಲ್ಲಿ ನೀಡಲಾಗಿರುವ ಬೀದಿ ಬದಿಯ ಪೆಟ್ಟಿಗೆ ಅಂಗಡಿಗಳ ಸಂಖ್ಯೆ ಎಷ್ಟು ?

ಶ್ರೀ ಎಸ್. ಎಂ. ಯಾಹ್ಯ (ಕೈಗಾರಿಕೆ, ಇಂಧನ ಹಾಗೂ ವಕ್ಫ್ ಸಚಿವರು).—

(ಅ) ೧೧೬

(ಆ) ೦೧

(ಇ) ಸಿ೨

(ಈ) ಸಾರ್ವಜನಿಕ ಸಂಚಾರಕ್ಕೆ ತೊಂದರೆ ಆಗುವುದರಿಂದ ಇಂತಹ ಬೀದಿ ಬದಿಯ ಪೆಟ್ಟಿಗೆ ಅಂಗಡಿಗಳನ್ನು ನಿರ್ಮಿಸಲು ಬೆಂಗಳೂರು ನಗರಸಭೆಯವರು ಆಕ್ಷೇಪಣೆಯನ್ನು ಎತ್ತಿದ್ದಾರೆ. ಈ ವಿಷಯವನ್ನು ನಗರಸಭೆಯ ಅಧಿಕಾರಿಗಳೊಡನೆ ಚರ್ಚಿಸಲಾಗುತ್ತಿದೆ. ಈ ವಿಷಯ ಇತ್ಯರ್ಥವಾದ ನಂತರ ೧೯೯೯–೨೦೦೦ ರಲ್ಲೂ ಸಹ ಬೀದಿ ಬದಿಯ ಪೆಟ್ಟಿಗೆ ಅಂಗಡಿಗಳನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುವುದು.